## ಮೈಸೂರು ಚೀಫ್ ಕೋರ್ಟನಲ್ಲಿ.

### ಕ್ರಿಮಿನಲ್ ತರಫ್.

ಸ್ರ 1884ನೇ ಇಸವಿ ಮಾರ್ಚೀ ತಿಂಗಳು 27ನೇ ತಾರೀಖಿನ ರೂಲ್ ಆಫ್ ಪ್ರಾಕ್ಟಿಸ್ ನಂ. 31.

ಆಫ್ಟಿಂಗ್ ಚೀಫ್ ಜಡ್ಜಿಯವರು ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡ್ 292ನೇ ಸೆಕ್ಷನ್ ಮೇರಿಗೆ ಇದರ ಕೆಳಗೆ ಕಾಣಿಸಿ ಇರುವ ರೂಲ್ಸಗಳನ್ನು ಯೇರ್ಪಾಡು ಮಾಡಿ ಗವರ್ನ್‌ಮೆಂಟಿನವರ ಅನುಮತಿ ಪಡೆದು ಪ್ರಸಿದ್ಧಪಡಿಸುತ್ತಾರೆ.

ಯಲ್ಲಾ ಸೆಷನ್ ಜಡ್ಜಿಗಳು ಮತ್ತು ಯಲ್ಲಾ ಮಾಜಿಸ್ಟ್ರೇಟರುಗಳು ಸಹಾ ಪ್ರತಿ ತಿಂಗಳ ಆಖೈರಿನಲ್ಲಿ ನಗದಿ ಬುಕ್ಕು ಯಂಬ 14ನೇ ನಂಬರ್ ರಿಜಿಸ್ಟರನ್ನು, ಜುರ್ಮಾನೆ ವಿಧಿಸಲ್ಪಟ್ಟು ದಾಖಲ್ ಮಾಡಿ ಇರುವ 7ನೇ ನಂಬರ್ ರಿಜಿಸ್ಟರನ್ನು ಸಹಾ ಮುಖ್ಯ ತನಿಖಿ ಮಾಡಬೇಕಾದ್ದಲ್ಲದೆ ಆಗಾಗ್ಗೆ ರಿಕಾರ್ಡುಗಳ ಮೊಕಾಬಿಲೆಯಿಂದ ತಾಳೆ ನೋಡತಕ್ಕದ್ದು.

2. ಸೆಷನ್ ಜಡ್ಜಿಯವರು, ಮಾಜಿಸ್ಟ್ರೇಟರು ಸಹಾ 6 ತಿಂಗಳಿಗೆ ವಂದಾವರ್ತಿ ಖಜಾನೆಯ ಮಾಹೇವಾರಿ ಜಮಾ ಲೆಖ್ಖಕ್ಕೆ 7ನೇ ಮತ್ತು 14ನೇ ನಂಬರ್ ರಿಜಿಸ್ಟರುಗಳಲ್ಲಿ ದಾಖಲಾಗಿ ಇರುವಂಥಾದ್ದು ಮೊಕಾಬಿಲೆ ನೋಡಿಕ್ಕೊಂಡು ತಾಳೇ ಬೀಳುತ್ತದೋ ಇಲ್ಲವೋ ಯಂಬವದನ್ನು ಚೀಫ್ ಜಡ್ಜಿಯವರಿಗೆ ರಿಪೋರ್ಟು ಮಾಡಬೇಕು. ಅಂತಾ ರಿಪೋರ್ಟನ್ನು ಯಿದರ ಸಂಗಡ ಕೆಳುಹಿಸಿ ಯಿರುವ ನಮೂನೆ ಪ್ರಕಾರ ಪ್ರತಿ ವರುಷ ಜನವರೀ 15ನೇ ತಾರೀಖಿನಲ್ಲಿಯೂ ಜೂಲೈ 25ನೇ ತಾರೀಖಿನಲ್ಲಿಯೂ ಕೆಳುಹಿಸುತ್ತಾ ಬರಬೇಕು.

| ಆರು ತಿಂಗಳಲ್ಲಿ ವಿಧಿಸೋಣಾದ ಜುರ್ಮಾನೆ ಜೊಬಲಗು. | ಸಾಲ್ ಗುಜಸ್ತಾಗಳ ಬಾಕಿ. | ಜುಮ್ಲಾ. | ವಸೂಲಾದ ಜುರ್ಮಾನೆ ಮೊಬಲಗು. | | | ಸೂಫ್ಲ ನಮಾಡಿ ಇರುವ ಜುರ್ಮಾನೆ ಮೊಬಲಗು. | ಆರು ತಿಂಗಳಲ್ಲಿ ವಸೂಲಾಗದೆ ನಿಂತಿದ್ದ ಜುರ್ಮಾನೆ ಮೊಬಲಗು. | ಪರಿಹಾರ ಪ್ರಾಬ್ಯಕ್ಕಾಗಿ ಕೊಟ್ಟ ಮೊಬಲಗು. | ಸರಕಾರಕ್ಕೆ ಜಮೆ ಕೊಟ್ಟ ಮೊಬಲಗು. | ವಸೂಲಾಗದೆ ಬಾಕಿಯಲ್ಲಿ ನಿಂತು ಇರುವ ಮೊಬಲಗು. | ನರೂ. |
|---|---|---|---|---|---|---|---|---|---|---|---|
| | | | ಆರು ತಿಂಗಳಲ್ಲಿ ವಿಧಿಸೋಣಾದ ಜುರ್ಮಾನೆಗಳ ಪೈಕಿ. | ಇದಕ್ಕೆ ಹಿಂದೆ ವಿಧಿಸಲ್ಪಟ್ಟ ಜುರ್ಮಾನೆಗಳ ಪೈಕಿ. | ಜುಮ್ಲಾ. | | | | | | |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| | | | | | | | | | | | |

ಕೋರ್ಟ ಹುಕ್ಕುಂ ಮೇರಿಗೆ,

ಎಸ್. ಹೇಮಾಜಿರಾವ್,

ರಿಜಿಸ್ಟ್ರಾರ್.